ಮೂಲ ದಾವಾ ಸಂಖ್ಯೆ. 52/2020 ಪಿ ಡಬ್ಲ್ಯೂ 3

(ದಿನಾಂಕ 08-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ 10 ನೇ ಪ್ರತಿವಾದಿ ಪರ ಶ್ರೀ ಬಿ ಬಿ ಆರ್ ವಕೀಲರಿಂದಃ-

ಈ ದಾವೆಯ ಬಗ್ಗೆ ನನಗೆ ಮಾಹಿತಿ ಇದೆ. ರಾಮಾನಾಯ್ಕ ಇವನು ತನ್ನ ಅಣ್ಣತಮ್ಮಂದಿರ ಮೇಲೆ ಈ ದಾವೆ ದಾಖಲಿಸಿದ್ದಾನೆ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಯರು ನನ್ನ ತಂದೆಯ ಅಕ್ಕನ ಮಕ್ಕಳಾಗಬೇಕು. ಸದರಿಯವರು ನನ್ನ ತಂದೆಯ ಅಕ್ಕನ ಮಕ್ಕಳಾಗಿರುವುದರಿಂದ ಅವರ ಒಡನಾಟ ನನಗೆ ಚೆನ್ನಾಗಿದೆ ಎಂದರೆ ಸರಿ. ನನಗೆ ವಾದಿಯು ಬಹಳ ಆತ್ಮೀಯ ಎಂದರೆ ಸಾಕ್ಷಿಯು ನನಗೆ ಎಲ್ಲರೂ ಆತ್ಮೀಯರು ಎನ್ನುತ್ತಾರೆ. ವಾದಿಯು ನನಗೆ ಆತ್ಮೀಯನಾಗಿರುವುದರಿಂದ ಅವನು ಹೇಳಿದಂತೆ ನಾನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬಂದಿರುತ್ತೇನೆಂದರೆ ಸರಿ. ನನಗೆ ಅನುಕೂಲವಾಗುವ ರೀತಿಯಲ್ಲಿ ಸಾಕ್ಷಿ ನುಡಿಯಬೇಕು ಅಂತಾ ಹೇಳಿ ವಾದಿ ನನಗೆ ಸಾಕ್ಷಿ ನುಡಿಯಲು ಕರೆದುಕೊಂಡು ಬಂದಿದ್ದಾರೆಂದರೆ ಸರಿ.

ವಾದಿಯು ಅವನಿಗೆ 20 ವರ್ಷ ವಯಸ್ಸು ಇದ್ದ ಸಮಯದಲ್ಲಿ ಅವನು ಕುಟುಂಬದಲ್ಲಿ ಬೇರೆಯಾಗಿದ್ದನು ಎಂದರೆ ನನಗೆ ಗೊತ್ತಿಲ್ಲ. ನಾನು 20 ವರ್ಷ ವಯಸ್ಸಿನಲ್ಲಿದ್ದಾಗ ಬೇರೆಯಾಗಿರುತ್ತೇನಂತಾ ವಾದಿ ನನಗೆ ಹೇಳಿರುವುದಿಲ್ಲ. ಈ ದಾವೆಯಲ್ಲಿ ವಾದಿ ಹಾಜರುಪಡಿಸಿರುವಂತಹ ದಾಖಲೆಗಳನ್ನು ನಾನು ನೋಡಿಲ್ಲ, ಸದರಿ ದಾಖಲೆಗಳಲ್ಲಿ ಯಾರ್ಯಾರ ಹೆಸರು ದಾಖಲಿದೆ ಎಂದು ನನಗೆ ಗೊತ್ತಿಲ್ಲ. 8 ನೇ ಪ್ರತಿವಾದಿ ಮದುವೆಯಾಗಿರುವ ವಿಚಾರ ನನಗೆ ಗೊತ್ತಿಲ್ಲ. 8 ನೇ ಪ್ರತಿವಾದಿ ಮದುವೆಯಾಗಿರುವ ವಿಚಾರ ನನಗೆ ಗೊತ್ತಿದ್ದರೂ ಸಹಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 8 ನೇ ಪ್ರತಿವಾದಿಗೆ ಸಾಕಷ್ಟು ಬಂಗಾರ ಕೊಟ್ಟು ಒಳ್ಳೆ ಮನೆತನಕ್ಕೆ ಮದುವೆ ಮಾಡಿಕೊಟ್ಟಿರುತ್ತಾರೆ ಈ ವಿಚಾರ ನಿಮಗೆ ಗೊತ್ತಾ ಎಂದರೆ ಇಲ್ಲ.

ಅವರವರ ಹಿಸ್ಸೆಗೆ ಬಂದ ಜಮೀನುಗಳಲ್ಲಿ ಅವರು ಉಳುಮೆ ಮಾಡುತ್ತಾರಾ ಇಲ್ಲವೆಂದರೆ ಸಾಕ್ಷಿಯು ಸ್ವಲ್ಪ ಸ್ವಲ್ಪ ಜಮೀನುಗಳಲ್ಲಿ ಉಳುಮೆ ಮಾಡುತ್ತಾರೆನ್ನುತ್ತಾರೆ. ವಾದಿಯ ತಂದೆಯ ಕಾಲದಲ್ಲಿ ವಾದಿ ಮತ್ತು ಅವರ ಸಹೋದರರು ವಿಭಾಗ ಮಾಡಿಕೊಂಡಿದ್ದು ಅದರಂತೆ ಅವರು ಅವರಿಗೆ ಬಂದ ಜಮೀನುಗಳಲ್ಲಿ ಉಳುಮೆ ಮಾಡುತ್ತಾ ಬಂದಿರುತ್ತಾರೆಂದರೆ ಸಾಕ್ಷಿಯು ಅವರಿಗೆ ಸ್ವಲ್ಪ ಸ್ವಲ್ಪ ಜಮೀನುಗಳನ್ನು ಕೊಟ್ಟಿದ್ದು ಅವುಗಳಲ್ಲಿ ಉಳುಮೆ ಮಾಡುತ್ತಿದ್ದಾರೆನ್ನುತ್ತಾರೆ.

ವಾದಿ ಮತ್ತು ಅವರ ಸಹೋದರರು ತಮ್ಮ ಜಮೀನುಗಳಲ್ಲಿ ಬೋರ್ವೆಲ್ ಹಾಕಿಸಿಕೊಂಡು ಉಳುಮೆ ಮಾಡುತ್ತಿದ್ದಾರೆಂದರೆ ಸರಿ. ವಾದಿಯು ತನಗೆ ಅನುಕೂಲವಾಗುವ ರೀತಿಯಲ್ಲಿ ಸಾಕ್ಷಿ

ಹೇಳು ಅಂತಾ ಅವರು ಕರೆದುಕೊಂಡು ಬಂದಿದ್ದರಿಂದ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿ ಮತ್ತು ಅವರ ಸಹೋದರರು ಅವರ ತಂದೆಯ ಕಾಲದಲ್ಲಿ ವಿಭಾಗ ಮಾಡಿಕೊಂಡು ಅವರಿಗೆ ಬಂದ ಜಮೀನುಗಳಲ್ಲಿ ಅವರು ಸ್ವಾಧೀನದಲ್ಲಿದ್ದು ನಾನು ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 10 ನೇ ಪ್ರತಿವಾದಿ ಸ್ವಾಧೀನದಲ್ಲಿರುವ ಜಮೀನನ್ನು ನಾನು ನೋಡಿರುತ್ತೇನೆ. 10 ನೇ ಪ್ರತಿವಾದಿಯು ಅವನಿಗೆ ಬಂದ ಜಮೀನಿನಲ್ಲಿ ರೇಷ್ಮೆ ಬೆಳೆ ಬೆಳೆದು ಮನೆಯನ್ನು ಕಟ್ಟಿಕೊಂಡು ಸ್ವಾಧೀನದಲ್ಲಿರುತ್ತಾನೆಂದರೆ ಸಾಕ್ಷಿಯು ನನಗೆ ಹೇಳಲು ಬರುವುದಿಲ್ಲವೆನ್ನುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ